ಹುಬ್ಬಳ್ಳಿ ಕೃಷಿ ಮಾರುಕಟ್ಟೆ ಕುರಿತು

1987 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಹುಬ್ಬಳ್ಳಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ಅಮರಗೋಳದಹೊಸ ಸಂಕೀರ್ಣಕ್ಕೆ ಪೂರ್ತಿಸ್ಥಳಾಂತರಗೊಂಡಿದೆಯೇ ?*

ಆ) *ಅಮರಗೋಳ ಮಾರುಕಟ್ಟೆಯಲ್ಲಿ ಎಷ್ಟು ಕಛೇರಿ ಉಗ್ರಾಣಗಳನ್ನು ಕಟ್ಟಲಾಗಿದೆ. ಯಾವ ಆಧಾರದ ಮೇಲೆ ಅವುಗಳನ್ನು ವರ್ತಕರಿಗೆ ನೀಡಲಾಗಿದೆ ?*

ಇ) *ನ್ಯೂಕಾಟನ್ ಮಾರ್ಕೆಟನಿಂದ ಹೊಸ ಎ.ಪಿ.ಎಂ.ಸಿ. ಸಂಕೀರ್ಣಕ್ಕೆ ಇನ್ನು ಎಷ್ಟು ವರ್ತಕರು ಸ್ಥಳಾಂತರಗೊಳ್ಳಬೇಕಾಗಿದೆ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು ?*

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹತ್ತಿ ವ್ಯವಹಾರವನ್ನು ಸಂಪೂರ್ಣವಾಗಿ ಸ್ಥಳಾಂತರಿಸಿದೆ. ಉಳಿದಂತೆ ಇತರ ವ್ಯವಹಾರವನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) 201 ಅಂಗಡಿ-ವ-ಗೋದಾಮುಗಳನ್ನು ನೂತನ ಅಮರಗೋಳ ಮಾರುಕಟ್ಟೆ ಪ್ರಾಂಗಣದಲ್ಲಿ ಕಟ್ಟಲಾಗಿದೆ. ಅವುಗಳನ್ನು ಸಮಿತಿಯಿಂದ ಲೈಸನ್ಸ ಪಡೆದ ವರ್ತಕರಿಗೆ ಅವರು ಕ್ರಮಪಡಿಸಿದ ಹುಟ್ಟುವಳಿಗಳಲ್ಲಿ ನಡೆಸುವ ವ್ಯವಹಾರದ ಆಧಾರದ ಮೇಲೆ, ಲೀಸ್-ಕಂ-ಸೇಲ್ ಆಧಾರದ ಮೇಲೆ 144 ಅಂಗಡಿ-ವ-ಗೋದಾಮುಗಳನ್ನು ವಿತರಣೆ ಮಾಡಲಾಗಿದೆ.

ಇ) 50 ಜನ ಕ್ರಮಪಡಿಸಿದ ಹುಟ್ಟುವಳಿಗಳಲ್ಲಿ ವ್ಯಾಪಾರ ಮಾಡುವ ದಲ್ಲಾಲರು, ಮತ್ತು 49 ಜನ ಆಲುಗಡ್ಡೆ, ಉಳ್ಳಾಗಡೆ ವ್ಯಾಪಾರ ಮಾಡುವವರು ಹಾಗೂ 42 ಜನ ಇತರೆ ಕ್ರಮಪಡಿಸಿದ ಹುಟ್ಟುವಳಿಗಳಲ್ಲಿ ವ್ಯವಹಾರ ಹರುಸಿಸುತ್ತಿರುವ ಅರ್ಹ ಖರೀದಿದಾರರ ವ್ಯವಹಾರಗಳನ್ನು ಅಮರಗೋಳ ಮಾರುಕಟ್ಟೆ ಪ್ರಾಂಗಣಕ್ಕೆ ಸ್ಥಳಾಂತರಿಸಬೇಕಾಗಿದೆ. ಅರ್ಹ ದಲ್ಲಾಲರಿಗೆ ನಿಯಮಾನುಸಾರ ನಿವೇಶನಗಳನ್ನು ಹಂಚಲು ಕ್ರಮಕೈಗೊಳ್ಳಲಾಗುತ್ತಿದೆ.

ಕರ್ನಾಟಕ ಕಾರ್ಮಿಕ ಕಲ್ಯಾಣಮಂಡಳಿಯ ಸದಸ್ಯರ ನೇಮಕಾತಿ

1989 - ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಕಳೆದ 5 ವರ್ಷದ ಸದಸ್ಯರ ಪಟ್ಟಿ ಒದಗಿಸುವುದು. ಅವರು ಪ್ರತಿನಿಧಿಸುವ ಸಂಸ್ಥೆಗಳಾವುವು ?*

ಆ) *ಇದರ ಅವಧಿ ಎಷ್ಟು ? ಇವರನ್ನು ನೇಮಕ ಮಾಡುವಾಗ ಯಾವ ನಿಯಮಾವಳಿಯನ್ನು ಅನುಸರಿಸಲಾಗುತ್ತಿದೆ ?*